ಕರ್ನಾಟಕ ಸರ್ಕಾರ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಆಯುಕ್ತರ ಕಛೇರಿ, ನಂ.16–ಡಿ, 3ನೇ ಮಹಡಿ, ಡಿ. ದೇವರಾಜ ಅರಸು ಭವನ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–52.

ಸಂ: BCWD_TRAINING-1/Army/CR-4/2017-18 ದಿನಾಂಕ:26.12.2017

ಭಾರತೀಯ ವಾಯು ಸೇನೆಗೆ ಸೇರ ಬಯಸುವ ರಾಜ್ಯದ ಹಿಂದುಳಿದ ವರ್ಗಗಳ ಅರ್ಹ ಅಭ್ಯರ್ಥಿಗಳಿಗೆ ಆಯ್ಕೆಯ ಪೂರ್ವಸಿದ್ಧತೆ ಬಗ್ಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು 2017–18ನೇ ಸಾಲಿನಲ್ಲಿ ನೀಡುವ ವೃತ್ತಿ ಮಾರ್ಗದರ್ಶನ ಮತ್ತು ತರಬೇತಿ.

## ತರಬೇತಿಗಾಗಿ ಅಂತಿಮ ಆಯ್ಕೆ ಪ್ರಕ್ರಿಯೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ಸೂಚನೆಗಳು

1. ಕೇಂದ್ರ/ರಾಜ್ಯ ಸರ್ಕಾರ/ಅನುದಾನಿತ ಸಂಸ್ಥೆಗಳು/ಸಾರ್ವಜನಿಕ ಸ್ವಾಮ್ಯತೆಗೆ ಒಳಪಟ್ಟ ಸಂಸ್ಥೆಗಳಲ್ಲಿನ ನೌಕರರು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ನೀಡುವ ಸದರಿ ತರಬೇತಿಗೆ ಅರ್ಹರಿರುವುದಿಲ್ಲ.

2. ಹಾಜರಾಗಬೇಕಾದ ಅಭ್ಯರ್ಥಿಗಳ ವಿವರ, ದಿನಾಂಕ, ಸಮಯ ಮತ್ತು ಸ್ಥಳದ ವಿವರ.

| ದಿನಾಂಕ | ಸಮಯ | ತರಬೇತಿಗಾಗಿ ಅಂತಿಮ ಆಯ್ಕೆ ಪ್ರಕ್ರಿಯೆಗೆ ಹಾಜರಾಗಬೇಕಾದ ಅಭ್ಯರ್ಥಿಗಳ ತಾತ್ಕಾಲಿಕ ಪಟ್ಟಿ ಮತ್ತು ಹಾಜರಾಗಬೇಕಾದ ಸ್ಥಳದ ವಿವರ |
|---|---|---|
| 01.01.2018 | ಬೆಳಗ್ಗೆ 9.30 ಕ್ಕೆ | ಅಭ್ಯರ್ಥಿಗಳ ತಾತ್ಕಾಲಿಕ ಪಟ್ಟಿಯನ್ನು ಇಲಾಖಾ ವೆಬ್‌ಸೈಟ್ www.backwardclasses.kar.nic.in ನಲ್ಲಿ ಪ್ರಕಟಿಸಿದೆ.<br>1. ತರಬೇತಿಗೆ ಬೆಂಗಳೂರಿನ ಸಂಸ್ಥೆಯನ್ನು ಆಯ್ಕೆ ಮಾಡಿಕೊಂಡಿರುವ ಅಭ್ಯರ್ಥಿಗಳು ಹಾಜರಾಗಬೇಕಾದ ಸ್ಥಳ: Universal coaching centre , #2922/20, Chord road, R.P.C layout, Near Attiguppe Bus stop,Vijayanagar, Bengaluru-560040<br>2. ತರಬೇತಿಗೆ ಬೆಳಗಾವಿಯ ಸಂಸ್ಥೆಯನ್ನು ಆಯ್ಕೆ ಮಾಡಿಕೊಂಡಿರುವ ಅಭ್ಯರ್ಥಿಗಳು ಹಾಜರಾಗಬೇಕಾದ ಸ್ಥಳ: Indianeye Security Pvt. Ltd. #451/1, village Belgundi, Dist Belgaum-591108 |

3. **ಅಭ್ಯರ್ಥಿಗಳ ಶೈಕ್ಷಣಿಕ ಅರ್ಹತೆಯ ಬಗ್ಗೆ ಮೂಲ ದಾಖಲೆಗಳ ಪರಿಶೀಲನೆ ಹಾಗೂ ವೈದ್ಯಕೀಯ/ದೇಹದಾರ್ಢ್ಯತೆಯ ಪರೀಕ್ಷೆಯನ್ನು ಆಯೋಜಿಸಿ ಅಂತಿಮವಾಗಿ ಅರ್ಹ ಅಭ್ಯರ್ಥಿಗಳನ್ನು ತರಬೇತಿಗೆ ಆಯ್ಕೆ ಮಾಡಲಾಗುವುದು.** ಅಭ್ಯರ್ಥಿಗಳು ನಿಗದಿತ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಖುದ್ದು ಹಾಜರಾಗುವುದು. ಅಭ್ಯರ್ಥಿಯ ಪರವಾಗಿ ಬೇರೆ ಯಾರೂ ಹಾಜರಾಗಲು ಅವಕಾಶವಿರುವುದಿಲ್ಲ. ನಿಗದಿತ ದಿನಾಂಕದಂದು ಹಾಜರಾಗದ ಅಭ್ಯರ್ಥಿಗಳನ್ನು ನಂತರ ತರಬೇತಿಯ ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.

4. ಸದರಿ ಮೂಲ ದಾಖಲೆಗಳ ಪರಿಶೀಲನೆ ಮತ್ತು ವೈದ್ಯಕೀಯ/ದೇಹದಾರ್ಢ್ಯತೆಯ ಪರೀಕ್ಷೆಯಲ್ಲಿ ಅಭ್ಯರ್ಥಿಯು ತರಬೇತಿಗೆ ಅನರ್ಹವೆಂದು ತಿಳಿದು ಬಂದಲ್ಲಿ ಅಂತಹ ಅಭ್ಯರ್ಥಿಯನ್ನು ತರಬೇತಿಗೆ ಪರಿಗಣಿಸಲಾಗುವುದಿಲ್ಲ.
5. ಸದರಿ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ಯಾವುದೇ ರೀತಿಯ ಪ್ರಯಾಣ ಭತ್ಯೆ ಅಥವಾ ಇತರೆ ಯಾವುದೇ ಭತ್ಯೆಯನ್ನು ನೀಡಲಾಗುವುದಿಲ್ಲ.
6. <u>ಮೂಲ ದಾಖಲೆಗಳ ಪರಿಶೀಲನೆಗೆ ಅಭ್ಯರ್ಥಿಗಳು ಹಾಜರುಪಡಿಸಬೇಕಾದ ದಾಖಲೆಗಳು:</u> ಅಭ್ಯರ್ಥಿಗಳು ತಾವು ಆನ್‌ಲೈನ್ ಅರ್ಜಿ ಜೊತೆ ಅಪ್ ಲೋಡ್ ಮಾಡಿರುವ ಎಲ್ಲಾ ದಾಖಲೆಗಳ ಒಂದು ಸೆಟ್ ದೃಢೀಕೃತ ಪ್ರತಿ ಹಾಗೂ ಅವುಗಳ ಮೂಲ ಪ್ರತಿಯೊಂದಿಗೆ ಮೂಲ ದಾಖಲೆಗಳ ಪರಿಶೀಲನೆಗೆ ಹಾಜರಾಗುವುದು. ದಾಖಲೆಗಳ ಪರಿಶೀಲನೆಯ ನಂತರ ಒಂದು ಸೆಟ್ ದೃಢೀಕೃತ ಪ್ರತಿಯನ್ನು ಮಾತ್ರ ಸಂಬಂಧಿಸಿದ ಅಧಿಕಾರಿ/ಸಿಬ್ಬಂದಿಗಳಿಗೆ ನೀಡುವುದು ಹಾಗೂ ಮೂಲ ದಾಖಲೆಗಳನ್ನು ಅಭ್ಯರ್ಥಿಗಳು ಸ್ಥಳದಲ್ಲಿಯೇ ಹಿಂದಿರುಗಿ ಪಡೆಯಲು ತಿಳಿಸಿದೆ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಥವಾ ಅಧಿಕಾರಿ/ಸಿಬ್ಬಂದಿಗಳು ಅಭ್ಯರ್ಥಿಗಳ ಯಾವುದೇ ಮೂಲ ದಾಖಲೆಗಳಿಗೆ ಜವಾಬ್ದಾರಿಯಾಗಿರುವುದಿಲ್ಲ. ಹಾಜರುಪಡಿಸಬೇಕಾದ ದಾಖಲೆಗಳು

   - ಅಭ್ಯರ್ಥಿಗಳು ಸಲ್ಲಿಸಿರುವ ಆನ್‌ಲೈನ್ ಅರ್ಜಿ ಪ್ರತಿ/ಸ್ವೀಕೃತಿ ಪ್ರತಿ.
   - ಎಸ್.ಎಸ್.ಎಲ್.ಸಿ./10ನೇ ತರಗತಿ ಅಂಕಪಟ್ಟಿ.
   - ದ್ವಿತೀಯ ಪಿ.ಯು.ಸಿ/12ನೇ ತರಗತಿ/10+2 ಅಂಕಪಟ್ಟಿ.
   - ಅಭ್ಯರ್ಥಿಯ ಹೆಸರಿನಲ್ಲಿ ಪಡೆದಿರುವ ಜಾತಿ ಮತ್ತು ಆದಾಯ ದೃಢೀಕರಣ ಪತ್ರ (ತಹಶೀಲ್ದಾರರಿಂದ ಪಡೆದಿರಬೇಕು).
   - ಅಭ್ಯರ್ಥಿಯ ಭಾವಚಿತ್ರ ಮತ್ತು ವಿಳಾಸವಿರುವ ಯಾವುದಾದರೊಂದು ಅಧಿಕೃತ ಗುರುತಿನ ಚೀಟಿ ಹಾಗೂ ಆನ್‌ಲೈನ್ ಅರ್ಜಿ ಜೊತೆ ಅಪ್ ಲೋಡ್ ಮಾಡಲು ತಿಳಿಸಿರುವ ಎಲ್ಲಾ ದಾಖಲೆಗಳು.
   - ಅಭ್ಯರ್ಥಿಯ ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ 4 ಭಾವಚಿತ್ರಗಳು. ಇದರ ಹಿಂದೆ ಅಭ್ಯರ್ಥಿಯು ತನ್ನ ಹೆಸರು, ಪ್ರವರ್ಗ, ವರ್ಷ (2017-18) ಮತ್ತು ತರಬೇತಿ-ವಾಯುಸೇನೆ ಎಂಬ ವಿವರವನ್ನು ನಮೂದಿಸಿ ನೀಡುವುದು.
   - **ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ಮುಚ್ಚಳಿಕೆ ಪತ್ರದ ವಿವರ ಹಾಗೂ ನಿಬಂಧನೆಗಳನ್ನು ರೂ.20/- ರ ಛಾಪಾ ಕಾಗದದಲ್ಲಿ ನಮೂದಿಸಿ, ಅಭ್ಯರ್ಥಿ ಹಾಗೂ ಪೋಷಕರ ಸಹಿಯೊಂದಿಗೆ ಮುಚ್ಚಳಿಕೆ ಪತ್ರದ ಮೂಲ ಪ್ರತಿ (Original) ಯನ್ನು ಸಲ್ಲಿಸುವುದು.**

7. ತರಬೇತಿಗೆ ಆಯ್ಕೆಯಾಗಿ ತರಬೇತಿ ಪಡೆಯುವ ಅಭ್ಯರ್ಥಿಗಳಿಗೆ ತರಬೇತಿ ಅವಧಿಯಲ್ಲಿ ಒಂದು ಜೊತೆ ಟ್ರ್ಯಾಕ್ ಸೂಟ್, ಒಂದು ಶಾರ್ಟ್ಸ್, ಒಂದು ಟೀಶರ್ಟ್ ಮತ್ತು ಒಂದು ಜೊತೆ ಶೂ ಗಳನ್ನು ಉಚಿತವಾಗಿ ನೀಡಲಾಗುವುದು.
8. ತರಬೇತಿ ಪಡೆಯುವ ಅಭ್ಯರ್ಥಿಗಳಿಗೆ ತರಬೇತಿ ಅವಧಿಯಲ್ಲಿ ಶೇ.80 ರಷ್ಟು ಹಾಜರಾತಿಯು ಕಡ್ಡಾಯವಾಗಿರುತ್ತದೆ.
9. ತರಬೇತಿಯನ್ನು ಮಧ್ಯಂತರದಲ್ಲಿ ಬಿಟ್ಟು ಹೋಗುವ ಅಭ್ಯರ್ಥಿಗಳಿಂದ/ತರಬೇತಿಯನ್ನು ಪೂರ್ಣಗೊಳಿಸದ ಅಭ್ಯರ್ಥಿಗಳಿಂದ ಅವರ ತರಬೇತಿಗೆ ಆಗಿರುವ ಖರ್ಚು ವೆಚ್ಚವನ್ನು ವಸೂಲಾತಿ ಮಾಡಲಾಗುವುದು.
10. ಅಭ್ಯರ್ಥಿಗಳು ಒಮ್ಮೆ ಆಯ್ಕೆ ಮಾಡಿಕೊಳ್ಳುವ ತರಬೇತಿ ಸಂಸ್ಥೆಯನ್ನು ಬದಲಾಯಿಸಲು ಹಾಗೂ ಅಭ್ಯರ್ಥಿಗಳು ಪರಸ್ಪರ ಬದಲಾವಣೆ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ.

11. ಸದರಿ ತರಬೇತಿಗೆ ಆಯ್ಕೆಯಾಗುವ ಅಭ್ಯರ್ಥಿಗಳಿಗೆ ತರಬೇತಿ ಸಂಸ್ಥೆಗೆ ಹೋಗಿ ವರದಿ ಮಾಡಿಕೊಳ್ಳಲು ಮತ್ತು ತರಬೇತಿ ಮುಗಿದ ನಂತರ ತಮ್ಮ ಸ್ವಂತ ಸ್ಥಳಕ್ಕೆ ಮರಳಲು ಯಾವುದೇ ರೀತಿಯ ಪ್ರಯಾಣ ಭತ್ಯೆ ಅಥವಾ ಇತರೆ ಯಾವುದೇ ಭತ್ಯೆಯನ್ನು ನೀಡಲಾಗುವುದಿಲ್ಲ ಹಾಗೂ ತರಬೇತಿ ಅವಧಿಗೆ ಯಾವುದೇ ಭತ್ಯೆಯನ್ನು ನೀಡಲಾಗುವುದಿಲ್ಲ.
12. ತರಬೇತಿಯ ಅವಧಿ 45 ದಿನಗಳಾಗಿರುತ್ತವೆ.
13. ಭಾರತೀಯ ವಾಯು ಸೇನೆಗೆ ಸೇರ ಬಯಸುವ ರಾಜ್ಯದ ಹಿಂದುಳಿದ ವರ್ಗಗಳ ಅರ್ಹ ಅಭ್ಯರ್ಥಿಗಳಿಗೆ ಆಯ್ಕೆಯ ಪೂರ್ವಸಿದ್ಧತೆ ಬಗ್ಗೆ ವೃತ್ತಿ ಮಾರ್ಗದರ್ಶನ ಮತ್ತು ತರಬೇತಿಯನ್ನು 2017-18ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಉಚಿತವಾಗಿ ನೀಡಲಾಗುತ್ತಿದ್ದು, ಉಚಿತ ಊಟ ಮತ್ತು ವಸತಿ ಸಹಿತ ತರಬೇತಿ ಇದಾಗಿದ್ದು, ಅಭ್ಯರ್ಥಿಯು ತರಬೇತಿ ಪಡೆಯುವ ಸಂಸ್ಥೆ/ಸ್ಥಳದಲ್ಲಿಯೇ ಉಳಿದುಕೊಂಡು ತರಬೇತಿಯನ್ನು ಪಡೆಯಬೇಕಾಗಿರುತ್ತದೆ.
14. ಅಭ್ಯರ್ಥಿಯು ತರಬೇತಿಗೆ ಆಯ್ಕೆಯಾದಲ್ಲಿ, ಅದೇ ದಿನದಿಂದ ತರಬೇತಿ ಸಂಸ್ಥೆಯಲ್ಲಿ ಉಳಿದುಕೊಂಡು, ತರಬೇತಿಯನ್ನು ಪಡೆಯಬೇಕಾಗಿರುವುದರಿಂದ ಅಭ್ಯರ್ಥಿಯು ತನಗೆ ಅಗತ್ಯವಾದ ಬಟ್ಟೆ ಇತ್ಯಾದಿ ವಸ್ತುಗಳನ್ನು ತನ್ನೊಂದಿಗೆ ತರುವುದು.
15. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬಹುದಾದ ಸಹಾಯ ವಾಣಿ:

ಬೆಂಗಳೂರಿನ ಯೂನಿವರ್ಸಲ್ ಕೋಚಿಂಗ್ ಸೆಂಟರ್ ತರಬೇತಿ ಸಂಸ್ಥೆಯ ಸಹಾಯವಾಣಿ
ಸಂ:9686664981

ಬೆಳಗಾವಿಯ ಇಂಡಿಯನ್ಐ ಸೆಕ್ಯೂರಿಟಿ ಪ್ರೈ.ಲಿ. ತರಬೇತಿ ಸಂಸ್ಥೆಯ ಸಹಾಯವಾಣಿ
ಸಂ:08312555615/7975807371/8277709861.

ಆಯುಕ್ತರ ಕಛೇರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಸಹಾಯವಾಣಿ ಸಂ:080-65970004
(ಸಾರ್ವಜನಿಕ ರಜಾ ದಿನಗಳನ್ನು ಹೊರತುಪಡಿಸಿ ಮತ್ತು
ಸಮಯ ಬೆಳಗ್ಗೆ 10.00 ರಿಂದ ಸಂಜೆ 5.30 ರವರೆಗೆ ಮಾತ್ರ)

ಆಯುಕ್ತರು,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು